ಎಂ.ಎಲ್.ಎ. ಗೌರಿಶಂಕರ್‌ನ ಭೇಟಿ ಮಾಡಿ ಈ ಆಸಾದಿ ಬಾನಾ ತಿನ್ನೋದು ಮತ್ತು ಗಾವು ಸಿಗಿಯೋ ಸನ್ನಿವೇಶಗಳನ್ನು ಇಲ್ಲದಂತೆ ಮಾಡಿದರೆ ಸಾಕು. ಮಿಕ್ಕಿದ ಆರತಿ, ಪೂಜೆ, ಮಡಿಲು ತುಂಬುವುದು, ಪಲ್ಲಕ್ಕಿ ಉತ್ಸವ ನಡೆಯಲಿ.'

ಉಪವಿಭಾಗಾಧಿಕಾರಿ ಸುಜನ್‌ಗೆ ಈಗ ಸ್ವಲ್ಪ ಧೈರ್ಯಬಂದಿತು. ಜನಗಳ ನಂಬಿಕೆ ಒಡೆಯುವುದು ಬಹಳ ಕಷ್ಟವೆಂಬುದು ಈಗಾಗಲೇ ಕಂಡು ಬಂದ ಅನುಭವ ಮಾಸಿರಲಿಲ್ಲ. ಹೇಗೇ ಆಗಲಿ ಒಂದು ಸ್ಥಳೀಯ ಬೆಂಬಲ ವಿಠಲ್ ಜತೆಯಲ್ಲಿ ಎಂದು ಶ್ರೀರಾಮನನ್ನು ಜತೆ ಮಾಡಿಕೊಂಡಾಯಿತು. ಎಂ.ಎಲ್.ಎ.ಗೌರಿಶಂಕರ್‌ಗೆ ಕಾಲ್ ಮಾಡಿ ಭೇಟಿಯಾಗಲು ಕೇಳಿದಾಗ,'ಬನ್ನಿ ಮನೆಗೆ. ಮಾತಾಡೋಣ ಸಾಹೇಬ್ರೇ. ಇಲ್ಲ ನಾನೇ ನಿಮ್ಮ ಆಫೀಸ್ ಬಳಿ ಬರ್ತೀನಿ' ಎಂದು ಆಹ್ವಾನಿಸಿದರು. ಬೆಳಗ್ಗೆನೇ ಸ್ನಾನ ಮಾಡಿ ನೀಟ್ ಆಗಿ ಡ್ರೆಸ್ ಮಾಡಿಕೊಂಡು ಎಂ.ಎಲ್.ಎ.ನ ನೋಡೋಣವೆಂದು ಅವರ ಮನೆಯಲ್ಲಿರುವ ಕಚೇರಿಗೆ ಭೇಟಿ ನೀಡಿದ. ಒಂದೈದು ನಿಮಿಷದ ಬಳಿಕ ಎಂ.ಎಲ್.ಎ. ಬಂದು ಕೈ ಮುಗಿದು ಕೂತರು. ಐವತ್ತರ ಗಡಿ ದಾಟಿದ ಗೌರಿಶಂಕರ್ ಆಳುವ ಪಕ್ಷದವರಲ್ಲ. ಹಾಗಾಗಿ ಸ್ವಲ್ಪ ಬಿಡುವಾಗಿದ್ದರು. ಈ ಮಾರಮ್ಮನ ಮತ್ತು ಜಾತ್ರೆ ವಿಷಯದಲ್ಲಿ ಅವರ ಮಾತು ಸ್ವಲ್ಪ ನಡೆಯುತ್ತದೆ ಎಂದು ಗೊತ್ತು.

'ಏನು ಸಾಹೇಬ್ರೆ, ಏನೋ ಮುಖ್ಯ ವಿಷಯ ಅಂದ್ರಿ?'

'ಅದೇ ಊರ ಮಾರಮ್ಮನ ಜಾತ್ರೆ ಎರಡನೆ ದಿನ, ಮಾರಮ್ಮನಿಗೆ ನಿತ್ಯಪೂಜೆ ಅಲಂಕಾರ, ಆರತಿ ನಡೆಯಲಿ, ಎಂಟನೆ ದಿನದ ಬಾನ ಕಡಿಯುವುದು ಹತ್ತನೆದಿನದ ಗಾವು ಸಿಗುವುದು ಬೇಡ. ಅದಕ್ಕೆ ವಿಜ್ಞಾನ ಸಂಘದವರು, ಪ್ರಾಣಿ ದಯಾ ಸಂಘದವರು ಅರ್ಜಿ ನೀಡಿದ್ದಾರೆ. ನನಗೂ ಹಾಗೆ ಅನಿಸುತ್ತಿದೆ ಏನಂತೀರ' – ವಿವರಿಸಿದ.

'ನೀವು ಜಾತ್ರೆ ಸಂಬಂಧಿ ತೀರ್ಮಾನ ತಗೋವಾಗ ಮೊದಲೇ ತಿಳಿಸಬೋದಿತ್ತು. ಸರಪಂಚರು, ಮುಜುರೆಯವರು ಕೇಳಿದಾಗ, 'ಬೇಡ ಹೀಗೆಲ್ಲ ಮಾಡಬೇಡಿ' ಅಂತ ಒಂದು ಮಾತು ಹೇಳಿ.. ಬರೀ ಆರತಿ ಆಸೆ ಮಾಡಿ, ಹಣ್ಣು ಕಾಯಿ ಪೂಜೆ ಮಾಡಿ ಸಾಕು ಅಂತ ಆ ಜನಕ್ಕೆ ಹೇಳಬಹುದಿತ್ತಲ್ಲ. ಈಗ್ಯಾಕೆ ಹೀಗೆ ಯೋಚಿಸ್ತೀರಿ. ಹೋಗ್ಲಿ ಅವರು ನಿಮ್ಗೆ ತೋರಿಸ್ಕೊಂಡು ಬಲಿ ಕೊಡ್ತಾರೇನು?. ಸಬ್‌ಇನ್‌ಸ್ಪೆಕ್ಟರ್ ಮುರಳಿ ಮೋಹನ್ ಅವರನ್ನ ಒಂದು ಮಾತು ಕೇಳೋಣ. ಈಗೇನ್ ಮಾಡಕಾದೀತು?

'ಸರಿ ಸಾರ್, ಮುರುಳಿ ಮೋಹನ್ ಗೊತ್ತು. ಕೇಳ್ತೇನೆ. ಅವರ ಸಹಕಾರ ತೊಗೋತೇನೆ.'

'ತಡಿ ತಡೀರಿ ಸಾಹೇಬ್ರೆ, ತುಂಬಾ ಆತುರ ಬೇಡ. ಜನರನ್ನು ಎದುರು ಹಾಕಿಕೊಳ್ಳೋದು ಅಷ್ಟು ಸುಲಭ ಅಲ್ಲ. ಇಂಥ ಊರುಗಳಲ್ಲಿ ಜನರೇ ಪ್ರಧಾನ. ಸರಕಾರಿ ಅಧಿಕಾರಿಗಳ ಪ್ರವೇಶ ಇಂಥ ವಿಷಯಗಳಲ್ಲಿ ಇರುವುದಿಲ್ಲ. ಜನರು ಊರ ಹಿತಕ್ಕಾಗಿ ಮಾಡುತ್ತೇವೆ ಅಂತಾರೆ. ನೋಡಿ ನಿಮ್ಮಿಷ್ಟ' ಎಂದು ಎಂ.ಎಲ್.ಎ. ಕೈಮುಗಿದರು.

ಯಾಕೋ ಈ ಮನುಷ್ಯ ಸರಿಯಾಗಿ ಮಾತಾಡುತ್ತಿಲ್ಲ ಅನಿಸಿತು. ಜೀಪ್ ಹತ್ತಿ ಕಚೇರಿಗೆ ಬಂದಾಗ ಗೌರಿಶಂಕರ್ ಮಾತಾಡಿದ ರೀತಿ ಕಣ್ಣಿನ ಮುಂದೆ ಬಂದು ನಿವಾಳಿಸಿದಂತಿತ್ತು. ಸುಜನ್ ತನ್ನ ಕೆಲಸದಲ್ಲಿ ಮಗ್ನನಾದ. ಹಾಗೆಲ್ಲ ತಲೆಕೆಡಿಸಿಕೊಳ್ಳುವಷ್ಟು ಪುರುಸೊತ್ತು ಇರಲ್ಲ. ರಾತ್ರಿ ಸುಮಾರು ಏಳು ಗಂಟೆ ವೇಳೆಗೆ ಕಾನೂನು ಸಚಿವರಾದ ಸುಬ್ರಮಣ್ಯರವರಿಗೆ ಕಾಲ್ ಮಾಡಿ ಇರುವ ವಿಷಯವೆಲ್ಲ ಬಿಡಿಸಿ ಹೇಳಿ ಆಸಾದಿ ಹಸಿಮಾಂಸ ತಿನ್ನೋದು ಗಾವು ಸಿಗಿಯೋ ಪ್ರಸಂಗಗಳನ್ನು ವಿವರಿಸಿ, 'ಹೇಗಾದರೂ ಇದನ್ನು ತಡೆಯಬೇಕು ಸಾರ್' ಎಂದಾಗ ಮಿನಿಸ್ಟರ್ ಒಂದರೆಗಳಿಗೆ ಯೋಚಿಸಿ, 'ಸರಿ ಆ ಲೆಟರ್‌ಗಳನ್ನು ಸಹಿ ಮಾಡಿ ನನಗೆ ಕೂಡಲೆ ಕಳುಹಿಸಿ. ಮೇಲ್ ಮಾಡಿ. ನಾನು ಮುಂದಿನ ಕ್ರಮಕ್ಕೆ ಗೃಹಸಚಿವರಿಗೆ ತಿಳಿಸಿ ಪೊಲೀಸ್ ಇಲಾಖೆಗೆ ಎಚ್ಚರ ವಹಿಸಲು ಮತ್ತು ನಿಮ್ಮೊಡನೆ ಸಹಕರಿಸಲು ಆದೇಶ ಹೊರಡಿಸುತ್ತೇನೆ. ಕಾನೂನು ಬಾಹಿರವಾದದ್ದು ಯಾವುದೂ ನಡೆಯಬಾರದು. ಓ.ಕೆ.' ಎಂದರು.

'ಎಸ್ ಸಾರ್, ಅದೇ ನಮ್ಮ ಉದ್ದೇಶ'

ನಮಸ್ಕಾರ ಹೇಳಿ ಕಾಲ್ ಮುಗಿಸಿದ. ಸಬ್‌ಇನ್‌ಸ್ಪೆಕ್ಟರ್ ಮುರಳಿ ಮೋಹನ್ ಹೊರಗೆ ಎಲ್ಲೋ ವೆರಿಫಿಕೇಷನ್‌ಗೆ ಹೋಗಿದ್ದರು. ಉಪವಿಭಾಗಾಧಿಕಾರಿಗಳು ಕಾಲ್ ಮಾಡಿದರೆ ಬರದೆ ಇರಲಾರರು. 'ಐದು ನಿಮಿಷ ಬಂದೇ ಸಾರ್, ಅಲ್ಲೆ ಮಾತಾಡೋಣ' ಎಂದು ಉಪವಿಭಾಗಾಧಿಕಾರಿ ಕಾರ್ಯಾಲಯಕ್ಕೆ ಬಂದರು. ಒಂದೈದು ವರ್ಷ ಹಿರಿಯರಾದ ಸಬ್‌ಇನ್‌ಸ್ಪೆಕ್ಟರ್